೫ ಜನರಲ್ ಆಸ್ಪತ್ರೆ ಜಯನಗರ, ಬೆಂಗಳೂರು,
೬ ಜಿಲ್ಲಾ ಆಸ್ಪತ್ರೆ, ಕೋಲಾರ,
೭ —ಅದೇ— ತುಮಕೂರು
೮ —ಅದೇ— ಚಿತ್ರದುರ್ಗ
೯ —ಅದೇ— ಧಾರವಾಡ
೧೦ —ಅದೇ— ಮಂಡ್ಯ
೧೧ —ಅದೇ— ಬಿಜಾಪುರ

ಉ) ೧) ಕೆ.ಎಂ.ಸಿ. ಆಸ್ಪತ್ರೆ, ಹುಬ್ಬಳ್ಳಿ,
೨) ಜಿಲ್ಲಾ ಆಸ್ಪತ್ರೆ, ಬಿಜಾಪುರ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ—ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ ಒಂದೊಂದು ಉಪಕರಣಕ್ಕೆ ೧೪ ಲಕ್ಷ ೭೫ ಸಾವಿರ ರೂಪಾಯಿಗಳನ್ನು ಕೊಟ್ಟಿ ಕೊಂಡುಕೊಂಡು ವಿಡಿಯೋ ಎಂಡೋಸ್ಕೋಪ್ ಅನ್ನು ೯ ಆಸ್ಪತ್ರೆಗಳಿಗೆ ಸಪ್ಲೈ ಮಾಡಿದ್ದಾರೆ. ಎರಡು ಆಸ್ಪತ್ರೆಗಳಿಗೆ ಸಪ್ಲೈ ಆಗಿದ್ದರೂ ಇನ್‌ಸ್ಟಾಲ್ ಮಾಡಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಒಂದೂಮುಕ್ಕಾಲು ಕೋಟಿ ರೂಪಾಯಿ ಕೊಟ್ಟು ಉಪಕರಣವನ್ನು ಕೊಂಡು ಕೊಂಡು ಎಷ್ಟು ಆಸ್ಪತ್ರೆಗಳಲ್ಲಿ ಉಪಯೋಗಿಸುತ್ತಿದ್ದಾರೆ ಎಂದು ಕೇಳಿದ್ದಕ್ಕೆ ೧೧ ಆಸ್ಪತ್ರೆಗಳಿಗೆ ಈ ಉಪಕರಣವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಬೌರಿಂಗ್ ಹಾಸ್ಪಿಟಲ್ ಮತ್ತು ಲೇಡಿ ಕರ್ಜನ್ ಹಾಸ್ಪಿಟಲ್‌ನಲ್ಲಿ ಮಾತ್ರ ಈ ಒಂದು ಉಪಕರಣಗಳನ್ನು ಉಪಯೋಗಿಸುತ್ತಿದ್ದಾರೆ. ಬೌರಿಂಗ್ ಹಾಸ್ಪಿಟಲ್‌ನಲ್ಲಿ ಡಾ. ಚಂದ್ರಶೇಖರ್ ಎಂಬುವರು ಜಪಾನ್‌ಗೆ ಹೋಗಿ ಟ್ರೈನಿಂಗ್ ಪಡೆದಿದ್ದು ಅವರು ಈ ಉಪಕರಣವನ್ನು ಆಪರೇಟ್ ಮಾಡುತ್ತಿದ್ದಾರೆ. ಮಿಕ್ಕ ೧೧ ಆಸ್ಪತ್ರೆಗಳಲ್ಲಿ ಒಂದೂಮುಕ್ಕಾಲು ಕೋಟಿ ರೂಪಾಯಿ ಉಪಕರಣವನ್ನು ಉಪಯೋಗಿಸುತ್ತಾ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿವರವಾಗಿ ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಈಗಾಗಲೇ ನಾನು ಹೇಳಿದಹಾಗೆ ಈ ಒಂದ ಉಪಕರಣವನ್ನು ಖರೀದಿ ಮಾಡುವುದರಲ್ಲಿ ಅವ್ಯವಹಾರ ಆಗಿದೆ ಎಂಬ ಬಗ್ಗೆ ಮೇಲ್ಮನೆಯ ಸದಸ್ಯರನ್ನೊಳಗೊಂಡ ಸದನದ ಕಮಿಟಿಯನ್ನು ಮಾಡಲಾಗಿದೆ. ಅವರು ರಿಪೋರ್ಟ್ ಕೊಟ್ಟಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ —ಈ ಉಪಕರಣವನ್ನು ಕೊಂಡುಕೊಳ್ಳುವಾಗ ನ್ಯೂಸ್ ಪೇಪರ್‌ನಲ್ಲಿ ಕೊಟೇಷನ್ಸ್ ಕರೆದಿದ್ದಾರೋ ಅಥವಾ ನೇರವಾಗಿ ಸಪ್ಲೈಯರ್ಸ್‌ರವರಿಂದ ಕೊಂಡು ಕೊಳ್ಳಲಾಗಿದೆಯೇ ? ಸಪ್ಲೈಯರ್ಸ್‌ರವರ ಬಗ್ಗೆ ವಿವರ ಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಈ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ, ತರಿಸಿಕೊಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಒಂದೊಂದು ಉಪಕರಣಕ್ಕೆ ಸರ್ಕಾರವು ೧೪ ಲಕ್ಷ ೭೫ ಸಾವಿರ ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿದೆ. ಆದರೆ ಇದೇ ಸಪ್ಲೈಯರ್ಸ್‌ನವರು ಬೇರೆ ಪ್ರೈವೇಟ್ ನರ್ಸಿಂಗ್ ಹೋಮ್‌ಗೆ ೯ ಲಕ್ಷ ರೂಪಾಯಿಗೆ ಈ ಉಪಕರಣವನ್ನು ಬೆಂಗಳೂರಿನಲ್ಲಿ ಸಪ್ಲೈ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಮಾಹಿತಿ ಗೊತ್ತಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಈ ವಿಚಾರಕ್ಕೋಸ್ಕರವಾಗಿ ಸದನದ ಸಮಿತಿಯನ್ನು ಮಾಡಲಾಗಿದೆ. ಯಾರಾದರು ತಪ್ಪು ಮಾಡಿದ್ದರೆ ಖಂಡಿತವಾಗಿ ಶಿಕ್ಷೆ ಆಗುತ್ತದೆ, ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

## ಪುತ್ತೂರು ತಾಲ್ಲೂಕಿನ ಕೊಳ್ತಮಜಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯು ಹುದ್ದೆ

೨೫೨. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪುತ್ತೂರು ತಾಲ್ಲೂಕಿನ ಕೊಳ್ತಮಜಲು ಪ್ರಾಥಮಿಕ ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಯವರ ಹುದ್ದೆ ಬಹಳ ವರ್ಷಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).— ಆ) ಬಂದಿದೆ.

ಆ) ಖಾಲಿ ಇರುವ ಹುದ್ದೆಯನ್ನು ತುಂಬಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ. ಅಕುಕ ೩೮೬ ಹೆಚ್‌ಎಸ್‌ಹೆಚ್ ೯೦ ದಿನಾಂಕ ೨೫-೫-೧೯೯೦.

ಶ್ರೀ ಕೆ. ಕುಶಾಲ,—ಮಾನ್ಯ ಸಭಾಧ್ಯಕ್ಷಣಿಯವರೇ, ಈ ವೈದ್ಯಾಧಿಕಾರಿಯವರ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷಣಿಯವರೇ, ಈ ಹುದ್ದೆಗೆ ಪೋಸ್ಟಿಂಗ್ ಆಗಿದೆ.

ಶ್ರೀ ಕೆ. ಕುಶಾಲ.—ಮಾನ್ಯ ಸಭಾಧ್ಯಕ್ಷಣಿಯವರೇ, ವೈದ್ಯಾಧಿಕಾರಿಯವರ ಹುದ್ದೆಯನ್ನು ಭರ್ತಿ ಮಾಡಲಾಗಿದ್ದರೂ ಅವರು ಇನ್ನೂ ರಿಪೋರ್ಟ್ ಮಾಡಿಕೊಂಡಿಲ್ಲ. ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಮಾನ್ಯ ಸಚಿವರು ತಿಳಿಸಬೇಕು.....

(ಉತ್ತರ ಇಲ್ಲ)

ಉಪಾಧ್ಯಕ್ಷರು,—ಈ ಪ್ರಶ್ನೆ ಬಗ್ಗೆ ಸಾಕಷ್ಟು ಡಿಸ್ಕಷನ್ ಆಗಿದೆ. ಚೀಫ್ ಮಿನಿಸ್ಟರ್ ಇದರ ಬಗ್ಗೆ ನಿನ್ನೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಚೀಫ್ ಮಿನಿಸ್ಟರ್ ಅವರು ಉತ್ತರ ಕೊಟ್ಟಿರುವುದನ್ನು ಬಿಟ್ಟು ಬೇರೆ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಹಾಗೂ ಪಶುಸಂಗೋಪನಾ ಸಚಿವರು).—ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಸ್ಪೀಕರ್‌ರವರಿಗೆ ನಿನ್ನೆ ಪತ್ರ ಬರೆದಿದ್ದೇನೆ. ಈ ಪ್ರಶ್ನೆಗೆ ಮಾನ್ಯಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಇದನ್ನು ತೆಗೆದು ಹಾಕಿ ಎಂದು ಪತ್ರ ಬರೆದಿದ್ದೇನೆ. ಆದರೂ ಇದು ಪ್ರಿಂಟ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ಇವೊತ್ತು ಇದು ಅಚ್ಚು ಆಗಿರುವುದರಿಂದ ನೀವು ಉತ್ತರ ಕೊಡ ಬೇಕಾಗುತ್ತದೆ,

ಉಪಾಧ್ಯಕ್ಷರು.—ನಿನ್ನೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಟ್ಟರುವುದರಲ್ಲಿ ಏನಾದರೂ ವಿಷಯ ಬಿಟ್ಟಿದ್ದರೆ ಅದನ್ನು ತಾವು ಕೇಳಿ, ಉತ್ತರ ಕೊಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ನಿನ್ನೆ ಉತ್ತರ ಕೊಟ್ಟಿದ್ದರೆ ಈಗ ಈ ಪ್ರಶ್ನೆಯ ಅವಶ್ಯಕತೆ ಇಲ್ಲ. ನಿನ್ನೆ ನಾನು ಇರಲಿಲ್ಲ.

## ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆ

೧೮೧೩. ಶ್ರೀ ಬಿ. ಹೆಚ್. ಬನ್ನಿಕೋಡ್‌ರವರ (ಹಿರೇಕೆರೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೯-೯೦ನೇ ಸಾಲಿನಲ್ಲಿ ಮಂಜೂರು ಮಾಡಿದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ೧೯೮೯-೯೦ನೇ ಸಾಲಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಇ) ರಾಜ್ಯದಲ್ಲಿ ಕೊರತೆ ಇರುವ ವೈದ್ಯರ ಸಂಖ್ಯೆ ಎಷ್ಟು? ಮತ್ತು ಯಾವಾಗ ಈ ಹುದ್ದೆಗಳನ್ನು ಭರ್ತಿಮಾಡಲಾಗುವುದು (ಜಿಲ್ಲಾವಾರು ವಿವರ ಒದಗಿಸುವುದು)

ಶ್ರೀಮತಿ ಮನೋರಮಾ ಮಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೩೦

(ಅನುಬಂಧ-೨)ದಲ್ಲಿ ಜಿಲ್ಲಾವಾರು ಮಾಹಿತಿ ನೀಡಿದೆ)

ಆ) ಇಲ್ಲ.